**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಕ್ರಿ ಮಿಸ್ 214/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿ ಡಬ್ಲ್ಯೂ.01**

**ದಿನಾಂಕಃ 26.12.2024**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನನ್ನ ಮತ್ತು 1 ನೇ ಎದುರುದಾರ ಮದುವೆ ದಿನಾಂಕಃ 02.05.2015 ರಂದು ಲಕ್ಷ್ಮೇಶ್ವರದಲ್ಲಿ ಆಗಿರುತ್ತದೆ. ನನ್ನ ಮದುವೆ ಕಾಲಕ್ಕೆ ನನ್ನ ಪೋಷಕರು ಎದುರುದಾರರಿಗೆ 80 ಸಾವಿರ ನಗದು, 70 ಗ್ರಾಂ ಬಂಗಾರ ಮತ್ತು 20 ಸಾವಿರದ ಸಾಮಾನುಗಳನ್ನು ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ಬಾಳ್ವೆ ಮಾಡಲು 1 ನೇ ಎದುರುದಾರನ ಜೊತೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರೊಂದಿಗೆ ಒಂದು ತಿಂಗಳ ಕಾಲ ಮಾತ್ರ ಸಂಸಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2018 ರವರೆಗೆ ಸಂಸಾರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮದುವೆಯಾದ ಒಂದು ತಿಂಗಳ ತರುವಾಯ ಎದುರುದಾರರೊಂದಿಗೆ ಅಸಭ್ಯ ವರ್ತನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮನೆಯಲ್ಲಿ ನನ್ನ ಗಂಡ, ಆತನ ತಂದೆ-ತಾಯಿ, ತಮ್ಮ ಮಾತ್ರ ಇರುವುದು ಎಂದರೆ ಸಾಕ್ಷಿಯು ಅವರ ತಂಗಿಯೂ ಸಹ ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡನದು ಸಾಮಾನ್ಯ ಮಧ್ಯಮ ಕುಟುಂಬ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮಾವ ತೀರಿಕೊಂಡಿದ್ದು, ನನ್ನ ಗಂಡ ತಮ್ಮ ಉಪಜೀವನಕ್ಕಾಗಿ ತಮ್ಮ ಮನೆಯ ಮುಂದೆ ಕಿರಾಣಿ ಅಂಗಡಿ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಎರಡು ಅಂಗಡಿಗಳು ಮತ್ತು ಮಳಿಗೆಗಳು ಇವೆ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ನನ್ನ ಮತ್ತು ಮನೆಯವರ ಖರ್ಚು ನೀಗಿಸುತ್ತಾ ಬಂದಿದ್ದರೂ ಸಹ ನಾನು ಅವರಿಗೆ ಅಸಹಕಾರ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತಿಂಗಳಿಗೆ ರೂ.30 ಸಾವಿರ ಆದಾಯ ಇಲ್ಲ, ಅದೇ ರೀತಿ ಆ ಆದಾಯ ಬರುವ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ನನ್ನ ಗಂಡ ಸಂಶಯ ಪಡುವ ವ್ಯಕ್ತಿ ಅಲ್ಲ, ಮೃದು ಸ್ವಭಾವದ ವ್ಯಕ್ತಿ ಎಂದರೆ ಸರಿಯಲ್ಲ. ನನ್ನ ಗಂಡನ ಮೃದು ಸ್ವಭಾವವನ್ನು ದುರುಪಯೋಗ ಪಡಿಸಿಕೊಂಡು, ಈ ರೀತಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆ ಕಾಲಕ್ಕೆ ನನ್ನ ತಂದೆ ಸಾಲ ಮಾಡಿದ್ದಾರೆ ಎಂದು ಹೇಳಿದಾಗ ಎದುರುದಾರರು ನನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿರುತ್ತಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಬರೆಸಿರುವ ಸಂಗತಿಗಳು ನ್ಯಾಯಾಲಯದ ಸಹಾನುಭೂತಿ ಪಡೆಯಲು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅರ್ಜಿಯ 3 ನೇ ಪ್ಯಾರಾದಲ್ಲಿ ಹೇಳಿರುವ ಅಂಶಗಳು ಸತ್ಯಕ್ಕೆ ದೂರವಾದವು ಎಂದರೆ ಸರಿಯಲ್ಲ. ನನ್ನ ಅರ್ಜಿಯ 4 ನೇ ಪ್ಯಾರಾದಲ್ಲಿ ಹೇಳಿರುವ ಅಂಶಗಳನ್ನು ಸೃಷ್ಟಿ ಮಾಡಿ ಹೇಳಲಾಗಿದೆ ಎಂದರೆ

ಸರಿಯಲ್ಲ. ಎದುರುದಾರರು ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ ಬಗ್ಗೆ ನಾನು ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ನೀಡಿಲ್ಲ. ಸಾಕ್ಷಿಯು ಮುಂದುವರೆದು, ಎದುರುದಾರರ ಸಹಿ ಹೋಗಬಹುದು ಎಂದು ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ